ಸೋನಿ ಚಾನಲ್‌ನಲ್ಲಿ ಹತ್ತಾರು ವರ್ಷದಿಂದ 'ಸಿಐಡಿ' ಧಾರಾವಾಹಿ ತೋರಿಸಿ ತೋರಿಸಿ ಎಷ್ಟು ಹೆದರಿಸಿದ್ದಾರೆಂದರೆ ನಾನೀಗ ಟೀವಿ ಬಂದ್ ಮಾಡಿದ ಮೇಲೆ ರಿಮೋಟ್ ಮೇಲಿರುವ ಫಿಂಗರ್‌ಪ್ರಿಂಟ್ ಅಳಿಸಿಡಲು ಶುರುಮಾಡಿದ್ದೇನೆ!

■ ಇಂಡಿಯನ್ ಬಾಯ್

ಟ್ವಿಟಾಪತಿ

ಪಂಚ್‌ರ್!

ಸ್ಪೀಕರ್ ಬೋಪಯ್ಯ ಎಲ್ಲೋದ್ರು?
ಎಲ್ಲೂ ಕಾಣಿಸ್ತಿಲ್ವಲ್ಲ.

ಲೌಡ್ ಸ್ಪೀಕರ್ ಹಾಕ್ಕೊಂಡು
ಜೋರಾಗಿ ಕೂಗ್ರಪಾ ಒಂದ್ಸಲ...
ಯಾವುದಾದ್ರೂ ಮೂಲೆಯಿಂದ
ಉತ್ತರ ಬಂದ್ರೂ ಬರಬಹುದು!

ಆರ್‌ಟಿಇ ಅಡಿ ಉಚಿತ ಸೀಟು ಬೇಕಾ? ಶುಲ್ಕ ಕಟ್ಟಿ!

■ ಪೋಷಕರಿಂದ ವಸೂಲಿಗಿಳಿದ ಖಾಸಗಿ ಶಾಲೆಗಳು ■ ಸರ್ಕಾರದಿಂದ ಹಣ ಬಂದ ಬಳಿಕ ವಾಪಸ್: ಆಶ್ವಾಸನೆ

■ **ಲಿಂಗರಾಜ ಕೋರಾ**

ಬೆಂಗಳೂರು: 'ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ (ಆರ್‌ಟಿಇ) ಅಡಿ ನಿಮ್ಮ ಮಗುವಿಗೆ ಉಚಿತ ಸೀಟು ಬೇಕಾ? ಹಾಗಿದ್ದರೆ ನಿಮ್ಮ ಮಗುವಿನ ಶಿಕ್ಷಣಕ್ಕೆ ಸರ್ಕಾರ ನೀಡುವ ಹಣವನ್ನು ಈಗ ನೀವೇ ಪಾವತಿಸಿ, ಸರ್ಕಾರದಿಂದ ಹಣ ಬಂದ ಮೇಲೆ ಮರುಪಾವತಿ ಮಾಡುತ್ತೇವೆ.'

ಆರ್‌ಟಿಇ ಅಡಿ ಸೀಟು ಪಡೆಯಲು ಮುಂದಾದ ಪೋಷಕರಿಗೆ ಕೆಲವು ಖಾಸಗಿ ಶಾಲೆಗಳು ಮಾಡುತ್ತಿರುವ ತಾಕೀತು ಇದು. ಇದಕ್ಕೆ ಮಣಿದ ನೂರಾರು ಪೋಷಕರು ಶಾಲೆಗಳಿಗೆ ಶುಲ್ಕದ ಮೊತ್ತ ಕಟ್ಟಿದ್ದಾರೆ.

ತಮ್ಮ ಮಗಳು ಕಲ್ಯಾಣಿಗೆ ನಾಗರಭಾವಿಯಲ್ಲಿರುವ ಪ್ರತಿಷ್ಠಿತ ಶಾಲೆಯೊಂದರಲ್ಲಿ ಆರ್‌ಟಿಇಯಡಿ ಪ್ರವೇಶಕ್ಕಾಗಿ ಅರ್ಜಿ ಸಲ್ಲಿಸಲು ಹೋದ ಕುಮಾರ್ ಎಂಬುವರಿಗೂ ಶಾಲೆಯ ಆಡಳಿತ ಮಂಡಳಿ ಇಂತಹ ಷರತ್ತು ವಿಧಿಸಿತ್ತು. 'ನೀವು ಪಾವತಿಸಿದ ಶುಲ್ಕದ ರಸೀತಿಯನ್ನು ನೀಡುತ್ತೇವೆ. ಹೀಗಾಗಿ ನೀವು ಪಾವತಿಸಿದ ಹಣಕ್ಕೆ ಗ್ಯಾರಂಟಿಯೂ ಇರುತ್ತದೆ. ಸರ್ಕಾರದಿಂದ ಹಣ ಬಂದ ಕೂಡಲೇ ಈ ರಸೀತಿ ತೋರಿಸಿ ಹಣ ವಾಪಸ್ ಪಡೆಯಿರಿ' ಎಂದು ಶಾಲೆಯ ಸಿಬ್ಬಂದಿ ತಿಳಿಸಿದರು ಎಂದು ಹೇಳುತ್ತಾರೆ ಕುಮಾರ್.

'ಬೆಂಗಳೂರಿನಲ್ಲಿ ಮಾತ್ರವಲ್ಲದೆ ಬೆಂಗಳೂರು ಗ್ರಾಮಾಂತರ, ಗೌರಿಬಿದನೂರು, ಬೆಳಗಾವಿ, ಕೋಲಾರ, ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಇಂತಹ ಘಟನೆಗಳು ನಡೆದಿವೆ. ಈ ಜಿಲ್ಲೆಗಳ ಪೋಷಕರು ನಮಗೆ ಕರೆ ಮಾಡಿ ಹಣ ವಾಪಸ್ ಕೊಡಿಸುವಂತೆ ಗೋಗರೆಯುತ್ತಿದ್ದಾರೆ. ಹಣ ಪಡೆದಿರುವ ಶಾಲೆಗಳಿಗೆ ಭೇಟಿ ನೀಡಿ ಪೋಷಕರಿಗೆ ವಾಪಸ್ ಕೊಡಿಸುವ ಪ್ರಯತ್ನವನ್ನು ಸಹ ನಾವು ಆರಂಭಿಸಿದ್ದೇವೆ' ಎಂದು ಈ ವಿಷಯವನ್ನು ಖಾತರಿಪಡಿಸುತ್ತಾರೆ ಚೈಲ್ಡ್ ರೈಟ್ ಟ್ರಸ್ಟ್‌ನ ಕಾರ್ಯದರ್ಶಿ ನಾಗಸಿಂಹ.

ಹಣ ವಾಪಸ್ ನೀಡುತ್ತಿಲ್ಲ: ಮತ್ತೊಂದೆಡೆ ಕಳೆದ ವರ್ಷ ಹಣ ಪಾವತಿಸಿ ತಮ್ಮ ಮಕ್ಕಳಿಗೆ ಆರ್‌ಟಿಇಯಡಿ ಪ್ರವೇಶ ಪಡೆದಿರುವ ಪೋಷಕರು ಇದೀಗ ಸರ್ಕಾರದಿಂದ ಹಣ ಬಿಡುಗಡೆಯಾಗಿರುವುದನ್ನು ತಿಳಿದು ತಮ್ಮ ಹಣವನ್ನು ಮರುಪಾವತಿ ಮಾಡುವಂತೆ ಖಾಸಗಿ ಶಾಲೆಗಳಿಗೆ ದುಂಬಾಲು ಬೀಳುತ್ತಿದ್ದಾರೆ.

ಕೆಲ ಶಾಲೆಗಳು ಇನ್ನೂ ಹಣ ಬಂದಿಲ್ಲ ಎಂದು ಸಬೂಬು ಹೇಳುತ್ತಿದ್ದರೆ, ಮತ್ತೆ ಕೆಲ ಶಾಲೆಗಳು ಸರ್ಕಾರ ಪ್ರಸ್ತುತ ಅರ್ಧಮಾತ್ರ ಹಣ ನೀಡಿದ್ದು, ಪೂರ್ತಿ ಹಣ ನೀಡಿದ ಬಳಿಕ ನಿಮಗೆ ಸಂಪೂರ್ಣ ಹಣ ಪಾವತಿಸುವುದಾಗಿ ಹೇಳಿ ಪೋಷಕರನ್ನು ಸಾಗಹಾಕುತ್ತಿವೆ.

ಗೌರಿಬಿದನೂರು ತಾಲ್ಲೂಕಿನ ಪ್ರತಿಷ್ಠಿತ ಖಾಸಗಿ ಶಾಲೆಯೊಂದರಲ್ಲಿ ಮಗಳು ಅನಿಷಾಗೆ ಆರ್‌ಟಿಇಯಡಿ ಸೀಟು ಪಡೆಯಲು ಕಳೆದ ವರ್ಷ(2012-13ನೇ ಸಾಲಿನಲ್ಲಿ) 12 ಸಾವಿರ ರೂ. ಪಾವತಿಸಿದ್ದೆ. ಶಾಲೆಯವರು ಸರ್ಕಾರದಿಂದ ಹಣ ಬಂದ ಕೂಡಲೇ ಮರುಪಾವತಿಸುವುದಾಗಿ ಹೇಳಿದ್ದರು. ಈಗ ಕೇಳಿದರೆ ಇನ್ನೂ ಬಂದಿಲ್ಲ ಎಂದು ಸಬೂಬು ಹೇಳುತ್ತಿದ್ದಾರೆ. ಬಿಇಒ ಕಚೇರಿಗೆ ದೂರು ನೀಡುವುದಾಗಿ ಎಚ್ಚರಿಕೆ ನೀಡಿದ್ದರಿಂದ ಈಗ ಮರುಪಾವತಿಸಲು ಒಪ್ಪಿಕೊಂಡಿದ್ದಾರೆ ಎಂದು ಗೌರಿಬಿದನೂರು ನಿವಾಸಿ ರಾಮಣ್ಣ ತಿಳಿಸಿದ್ದಾರೆ.

ಒಕ್ಕೂಟದ ಸಮರ್ಥನೆ: ವಿಪರ್ಯಾಸ ಅಂದರೆ ಪೋಷಕರಿಂದ ಹಣ ಪಡೆಯುತ್ತಿರುವ ಖಾಸಗಿ ಶಾಲೆಗಳ ಈ ಕ್ರಮವನ್ನು ಖಾಸಗಿ ಶಾಲೆಗಳ ಒಕ್ಕೂಟ ಸಮರ್ಥಿಸಿಕೊಳ್ಳುತ್ತದೆ.

ಈ ಸಂಬಂಧ 'ಉದಯವಾಣಿ'ಯೊಂದಿಗೆ ಮಾತನಾಡಿದ ಕರ್ನಾಟಕ ರಾಜ್ಯ ಖಾಸಗಿ ಶಾಲೆಗಳ ಒಕ್ಕೂಟದ ಸಂಚಾಲಕ ಶಶಿಕುಮಾರ್, ಖಾಸಗಿ ಶಾಲೆಗಳು ಪೋಷಕರಿಂದ ಹಣ ಪಡೆಯುತ್ತಿದ್ದರೆ ಅದು ತಪ್ಪು. ಆದರೆ, ಇದಕ್ಕೆ ಆರ್‌ಟಿಇಯಡಿ ದಾಖಲಾದ ಮಕ್ಕಳಿಗೆ ನೀಡಬೇಕಾದ ಮರುಪಾವತಿ ಹಣವನ್ನು ಸರ್ಕಾರ ಸಮಯಕ್ಕೆ ಸರಿಯಾಗಿ ನೀಡದಿರುವುದೇ ಕಾರಣ. ಹೀಗಾಗಿ ಇದರ ಹೊಣೆಯನ್ನು ಸರ್ಕಾರವೇ ಹೊರಬೇಕಾಗುತ್ತದೆ ಎಂದು ಹೇಳುತ್ತಾರೆ.

ಮೊದಲ ಕಂತಿನ ಹಣ ಬಿಡುಗಡೆಯಾಗಿದ್ದರೂ, ಇನ್ನೂ ಒಂದಷ್ಟು ಹಣ ಶಾಲೆಗಳಿಗೆ ತಲುಪಿಲ್ಲ, ಇನ್ನು ಎರಡನೇ ಕಂತಿನ ಹಣ ಜನವರಿ ಎರಡನೇ ವಾರ ಬಿಡಗಡೆಯಾಗಬೇಕಿತ್ತು. ಆದರೆ, ಇನ್ನೂ ಬಿಡುಗಡೆಯಾಗಿಲ್ಲ, ಇಂತಹ ಸಂದರ್ಭದಲ್ಲಿ ಆರ್ಥಿಕ ಹೊರೆ ತಡೆಯಲಾಗದ ಕೆಲ ಶಾಲೆಗಳು ಅನಿವಾರ್ಯವಾಗಿ ಪೋಷಕರಿಂದ ಹಣ ಪಡೆದಿರಬಹುದು ಎಂದು ಅವರು ಹೇಳುತ್ತಾರೆ.

ಸರ್ಕಾರ ಕೇವಲ ಪ್ರತಿಷ್ಠಿತ ಹಾಗೂ ಅಂತಾರಾಷ್ಟ್ರೀಯ ಶಾಲೆಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಮಾತನಾಡಬಾರದು. ಮಧ್ಯಮ ಹಾಗೂ ಕೆಳವರ್ಗದ ಶಾಲೆಗಳ ಬಗ್ಗೆ ಕಾಳಜಿ ವಹಿಸಬೇಕು. ಕೂಡಲೇ ಸರ್ಕಾರ ಎರಡನೇ ಹಂತದ ಹಣ ಬಿಡುಗಡೆ ಮಾಡಲಿ.

● **ಶಶಿಕುಮಾರ್, ಸಂಘಟನಾ** ಕಾರ್ಯದರ್ಶಿ, ಖಾಸಗಿ ಶಾಲಾ ಆಡಳಿತ ಮಂಡಳಿಗಳ ಒಕ್ಕೂಟ.

ಆರ್‌ಟಿಇಯಡಿ ಖಾಸಗಿ ಶಾಲೆಗಳು ದಾಖಲಿಸಿಕೊಳ್ಳುವ ಮಕ್ಕಳಿಗೆ ನಿಗದಿಪಡಿಸಲಾಗಿರುವ ಶುಲ್ಕವನ್ನು ಸರ್ಕಾರ ನೀಡಲಿದೆ. ಈ ಹಣವನ್ನು ಖಾಸಗಿ ಶಾಲೆಗಳು ಪೋಷಕರಿಂದ ಪಡೆಯುವುದು ಕಾಯ್ದೆಯ ಉಲ್ಲಂಘನೆ. ಈ ರೀತಿ ಹಣ ಕೇಳುವ ಶಾಲೆಗಳ ಬಗ್ಗೆ ಪೋಷಕರು ಸ್ಥಳೀಯ ಬಿಇಒ ಕಚೇರಿಗಳಿಗೆ ದೂರು ನೀಡಿದರೆ ಕಾನೂನು ಕ್ರಮ ಕೈಗೊಳ್ಳಲಾಗುವುದು.

● **ಎಸ್.ಆರ್. ಉಮಾಶಂಕರ್,** ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ.

ಜ. 28, 29ರಂದು ಚುಂಚಶ್ರೀ ಪುಣ್ಯಾರಾಧನೆ



ಮಂಡ್ಯ: ಡಾ.ಬಾಲಗಂಗಾಧರನಾಥ ಸ್ವಾಮೀಜಿಯವರ ಪುಣ್ಯಾರಾಧನಾ ಮಹೋತ್ಸವ ಜ.28 ಹಾಗೂ ಜ.29ರಂದು ಆದಿ ಚುಂಚನಗಿರಿ ಕ್ಷೇತ್ರದಲ್ಲಿ ನಡೆಯಲಿದ್ದು, ಎರಡು ದಿನಗಳ ಕಾಲ ಭಕ್ತಿ ನಮನ ಕಾರ್ಯಕ್ರಮ ಏರ್ಪಡಿಸಲಾಗಿದೆ.

ಆದಿಚುಂಚನಗಿರಿ ಕ್ಷೇತ್ರದಲ್ಲಿ ಶುಕ್ರವಾರ ಸುದ್ದಿಗಾರರೊಂದಿಗೆ ಮಾತನಾಡಿದ ಮಹಾಸಂಸ್ಥಾನದ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಈ ಮಾಹಿತಿ ನೀಡಿದರು. ಜ.28ರಂದು ಸಂತ ಸಂಗಮ ಕಾರ್ಯಕ್ರಮವನ್ನು ಆಯೋಜಿಸಲಾಗಿದ್ದು, ಬಾಬಾ ರಾಮದೇವ್, ಸ್ವಾಮಿ ನಾರಾಯಣ್, ನಾಥ ಸಂಪ್ರದಾಯದ ಶ್ರೀ ಆದಿತ್ಯಾನಂದ ಸ್ವಾಮೀಜಿ, ಆರ್ಟ್ ಆಫ್ ಲಿವಿಂಗ್‌ನ ರವಿಶಂಕರ್ ಗುರೂಜಿ ಸೇರಿದಂತೆ ಅನೇಕ ಮಠಾಧೀಶರು ಮತ್ತು ಸಂತ ಶಿರೋಮಣಿಗಳು ಭಾಗವಹಿಸಲಿದ್ದಾರೆ ಎಂದರು. ಜ.29ರಂದು ನೂತನ ಪೀಠಾಧ್ಯಕ್ಷ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ಭಕ್ತ ಸಂಗಮ ಕಾರ್ಯಕ್ರಮ ನಡೆಯಲಿದ್ದು, ಸಾಹಿತಿಗಳು, ಕಲಾವಿದರು ಭಾಗವಹಿಸಲಿದ್ದಾರೆ ಎಂದರು.

ಉಪನ್ಯಾಸಕರ ವರ್ಗಾವಣೆಗೆ ಕೌನ್ಸೆಲಿಂಗ್

ಬೆಂಗಳೂರು: ಜ.21ರವರೆಗೆ ಮೂರು ವರ್ಷ ಒಂದೇ ಸ್ಥಳದಲ್ಲಿ ಸೇವೆ ಸಲ್ಲಿಸಿರುವ ಹಾಗೂ ಪರಿವೀಕ್ಷಣಾ ಅವಧಿ ಪೂರೈಸಿರುವ ಪದವಿಪೂರ್ವ ಶಿಕ್ಷಣ ಇಲಾಖೆಯ ಸಿ ವಲಯದ ಉಪನ್ಯಾಸಕರಿಗೆ ಜ.29 ಮತ್ತು 30ರಂದು ಆದ್ಯತೆ ಮೇರೆಗೆ ವರ್ಗಾವಣೆ ಕೌನ್ಸೆಲಿಂಗ್ ನಡೆಯಲಿದೆ.

ಬೆಂಗಳೂರಿನ ಮಲ್ಲೇಶ್ವರದ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಲ್ಲಿ 29ರಂದು ಬೆಳಗ್ಗೆ 9 ಗಂಟೆಗೆ ಕನ್ನಡ, ಹಿಂದಿ, ಉರ್ದು, ಸಂಖ್ಯಾಶಾಸ್ತ್ರ, ಮಧ್ಯಾಹ್ನ 3 ಗಂಟೆಗೆ ಇಂಗ್ಲೀಷ್, ಭೌತಶಾಸ್ತ್ರ ರಸಾಯನ ಶಾಸ್ತ್ರ ಮತ್ತು 30ರಂದು ಬೆಳಗ್ಗೆ 9 ಗಂಟೆಗೆ ಅರ್ಥಶಾಸ್ತ್ರ ಮತ್ತು ಗಣಿತ, ಮಧ್ಯಾಹ್ನ 3 ಗಂಟೆಗೆ ಇತಿಹಾಸ ಮತ್ತು ಜೀವಶಾಸ್ತ್ರ ವಿಷಯಗಳಿಗೆ ಸಂಬಂಧಿಸಿದ ವರ್ಗಾವಣೆ ಕ್ರಮವನ್ನು ಜಾರಿಗೊಳಿಸಲಾಗುವುದು ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ.

ಆಯುಷ್ ವೈದ್ಯರಿಂದ ಅರ್ಜಿ ಆಹ್ವಾನ

ಬೆಂಗಳೂರು: ಆಯುಷ್ ಇಲಾಖೆಯು ವಿವಿಧ ವೈದ್ಯ ಪದ್ಧತಿಗಳಲ್ಲಿ ಗಣನೀಯ ಸೇವೆ ಸಲ್ಲಿಸಿದ ಆರು ವೈದ್ಯರಿಗೆ ಮಾಸಿಕ ಗೌರವಧನ ವಿತರಣೆ ಹಾಗೂ ಆಯುರ್ವೇದ ಪದ್ಧತಿಯಲ್ಲಿ ಒಬ್ಬರಿಗೆ ಧನ್ವಂತರಿ ಸ್ವರ್ಣ ಪದಕ, ಹೋಮಿಯೋಪತಿ ಹಾನಿಮನ್ ಸ್ವರ್ಣ ಪದಕ, ಯುನಾನಿ ಅವಿಸಿನ್ನ ಸ್ವರ್ಣ ಪದಕ ಪ್ರಕೃತಿ ಚಿಕಿತ್ಸೆ ಯೋಗ ಪದ್ಧತಿಗೆ ಪತಂಜಲಿ ಸ್ವರ್ಣ ಪದಕ ಗೌರವಕ್ಕೆ ಅರ್ಜಿ ಆಹ್ವಾನಿಸಿದೆ. ಅರ್ಹರು ನಿಗದಿತ ಅರ್ಜಿಗಳನ್ನು ಸ್ವವಿವರ ಸಹಿತ ಫೆ.15ರೊಳಗೆ ನಿರ್ದೇಶಕರು, ಆಯುಷ್ ನಿರ್ದೇಶನಾಲಯ, ಧನ್ವಂತ್ರಿ ರಸ್ತೆ, ಬೆಂಗಳೂರು. ಈ ವಿಳಾಸಕ್ಕೆ ಕಳುಹಿಸಬಹುದು ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ. ವಿವರಗಳಿಗೆ ದೂ: 080-22876553 ಸಂಪರ್ಕಿಸಬಹುದು.

ಸಾವಿನಲ್ಲೂ ಒಂದಾದ ಅಣ್ಣ-ತಂಗಿ

ಹಾವೇರಿ: ಸಹೋದರ- ಸಹೋದರಿಯರಿಬ್ಬರು ಸಾವಿನಲ್ಲೂ ಒಂದಾದ ಘಟನೆ ತಾಲೂಕಿನ ಕರ್ಜಗಿ ಗ್ರಾಮದಲ್ಲಿ ಶುಕ್ರವಾರ ನಡೆದಿದೆ. ಅನಾರೋಗ್ಯದಿಂದ ಬಳಲುತ್ತಿದ್ದ ಈಶ್ವರ ಶಿವಪ್ಪ ಹೊಸಮನಿ(45) ಶುಕ್ರವಾರ ಬೆಳಗ್ಗೆ ಮೃತಪಟ್ಟರು. ಅಣ್ಣನ ಸಾವಿನ ಸುದ್ದಿ ತಿಳಿದ ಸಹೋದರಿ ಪಾರವ್ವ ಶಿವಪ್ಪ ಹೊಸಮನಿ(35) ಕೂಡ ಒಂದೂವರೆ ಗಂಟೆ ಬಳಿಕ ಅಣ್ಣನ ಹೆಸರು ಹೇಳುತ್ತಲೇ ಪ್ರಾಣ ಬಿಟ್ಟಿದ್ದಾಳೆ. ಮೃತರಿಬ್ಬರೂ ಬುದ್ಧಿಮಾಂದ್ಯರಾಗಿದ್ದು, ವಿವಾಹವಾಗಿರಲಿಲ್ಲ.

ಗೋವಾಕ್ಕೆ ಹೋಗಬೇಕಾ? ಫೆ. 1ರಿಂದ ಶುಲ್ಕ ಪಾವತಿಸಿ

ಕಾರವಾರ: ಹೊರ ರಾಜ್ಯದ ಎಲ್ಲಾ ವಾಹನಗಳು ಗೋವಾ ಪ್ರವೇಶಿಸಲು ಫೆ.1 ರಿಂದ ಶುಲ್ಕ ಪಾವತಿಸುವುದನ್ನು ಕಡ್ಡಾಯ ಮಾಡಿ ಗೋವಾ ಸರ್ಕಾರ ಆದೇಶ ಹೊರಡಿಸಿದೆ.

ಕರ್ನಾಟಕ ಗಡಿ ದಾಟಿದ ಸುಮಾರು ಎರಡು ಕಿ.ಮೀ. ದೂರದ ಪೊಳೆಂ ಬಳಿಯ ಟೋಲ್‌ನಾಕಾವನ್ನು ಗೋವಾ ಸರಕಾರ ವಿಸ್ತರಿಸುತ್ತಿದೆ. ದ್ವಿಚಕ್ರ ವಾಹನಗಳಿಗೆ 15 ರೂ., ನಾಲ್ಕು ಚಕ್ರದ ವಾಹನಗಳಿಗೆ 250ರೂ. ಹಾಗೂ ಇತರ ಬೃಹತ್ ವಾಹನಗಳಿಗೆ 500 ರೂ. ಶುಲ್ಕವನ್ನು ಗೋವಾ ಸರಕಾರ ನಿಗದಿಪಡಿಸಿದೆ. ಗೋವಾದಲ್ಲಿ ಕಳೆದ ವರ್ಷದಿಂದ ಅದಿರು ವ್ಯವಹಾರ ಸ್ಥಗಿತಗೊಂಡಿದ್ದರಿಂದ ಆರ್ಥಿಕ ಸ್ಥಿತಿ ಬಿಗಡಾಯಿಸಿದೆ. ಹೀಗಾಗಿ ಆದಾಯದ ಮೂಲ ಹೆಚ್ಚಿಸಿಕೊಳ್ಳಲು ಸರಕಾರ ಅನ್ಯರಾಜ್ಯದ ವಾಹನಗಳಿಂದ ಶುಲ್ಕ ವಸೂಲಿ ಮಾಡುವ ನೂತನ ನೀತಿ ಜಾರಿಗೆ ತಂದಿದೆ. ಕಾರವಾರದ ಜನತೆ ಮದ್ಯ ಮತ್ತು ಪೆಟ್ರೋಲ್‌ಗಾಗಿ ಗೋವಾವನ್ನೇ ಅವಲಂಬಿಸಿದ್ದಾರೆ. ಪ್ರವಾಸಿಗರೂ ಸಾಕಷ್ಟು ಸಂಖ್ಯೆಯಲ್ಲಿ ಬರುತ್ತಾರೆ. ಗೋವಾದ ಪ್ರಸಿದ್ಧ ಕಾಣಕೋಣದ ಮಲ್ಲಿಕಾರ್ಜುನ, ಮಡಗಾಂವನ ಪಾತರೇಪೆ, ಮಹಾಲಕ್ಷ್ಮೀ, ರಾಮನಾಥ, ಶಾಂತಾದುರ್ಗಾದಂಥ ದೇವಾಲಯಗಳಿಗೆ ಸಾವಿರಾರು ಭಕ್ತರು ಭೇಟಿ ನೀಡುತ್ತಾರೆ. ಪ್ರವೇಶ ಶುಲ್ಕ ಕಡ್ಡಾಯಗೊಳಿಸಿರುವುದರಿಂದ ಎಲ್ಲಾ ದ್ವಿಚಕ್ರ, ನಾಲ್ಕು ಚಕ್ರ ವಾಹನಗಳು ಹಣ ಪಾವತಿಸಿ ಗೋವಾ ಪ್ರವೇಶಿಸಬೇಕಾಗುತ್ತದೆ.

ಕಾರವಾರ ಗಡಿ ಪ್ರದೇಶದಲ್ಲಿರುವ ಚೆಕ್‌ಪೋಸ್ಟ್.

ಈದ್ ಮುಬಾರಕ್... ಮುಸ್ಲಿಮರ ಪವಿತ್ರ ಹಬ್ಬ ಈದ್ ಮಿಲಾದ್ ಆಚರಣೆ ಸಂದರ್ಭದಲ್ಲಿ ಮುಸಲ್ಮಾನರು ಶುಕ್ರವಾರ ಬೆಂಗಳೂರಿನ ಟೌನ್ ಹಾಲ್ ಮುಂಭಾಗ ಮೆರವಣಿಗೆ ನಡೆಸಿದರು.

ಸೋಸಲೆ ಮಠಕ್ಕೆ ಶ್ರೀ ಸುವಿದ್ಯೇಂದ್ರ ತೀರ್ಥ ನೂತನ ಪೀಠಾಧಿಪತಿ

ರಾಯಚೂರು: ಮೈಸೂರಿನ ಸೋಸಲೆ ವ್ಯಾಸರಾಜರ ಮಠದ ಪೀಠಾಧಿಪತಿಗಳಾಗಿ ರಾಯಚೂರಿನ ಶ್ರೀ ಸುವಿದ್ಯೇಂದ್ರ ತೀರ್ಥರು ಜ.26ರಂದು ಅಧಿಕಾರ ಸ್ವೀಕರಿಸಲಿದ್ದಾರೆ.

ಮೂಲತಃ ದೇವದುರ್ಗ ತಾಲೂಕಿನ ಗಬ್ಬೂರು ಗ್ರಾಮದವರಾದ ಶ್ರೀ ಸುವಿದ್ಯೇಂದ್ರ ತೀರ್ಥರು ಇದಕ್ಕಿಂತ ಮೊದಲು ಮಂತ್ರಾಲಯದ ಶ್ರೀ ರಾಘವೇಂದ್ರಸ್ವಾಮಿಗಳ ಮಠದ ಪೂರ್ವ ಉತ್ತರಾಧಿಕಾರಿಯಾಗಿದ್ದರು. ಮಂತ್ರಾಲಯದ ಶ್ರೀ ಸುಶಮೀಂದ್ರ ತೀರ್ಥರಿಂದ ಶ್ರೀ ರಾಘವೇಂದ್ರಸ್ವಾಮಿಗಳ ಮಠದ ಪೀಠಾಧಿಪತಿಗಳಾಗಿ ನಿಯುಕ್ತಿಗೊಂಡಿದ್ದರು. ನಂತರ ಮಠವನ್ನು ಬಿಟ್ಟು ವಿವಿಧೆಡೆ ಆಧ್ಯಾತ್ಮ ಪ್ರಚಾರಕ್ಕಾಗಿ ಸಂಚಾರ ಕೈಗೊಂಡಿದ್ದರು. ಮಾನ್ವಿ ಸಂಜೀವರಾಯ ದೇವಸ್ಥಾನದಲ್ಲಿ ಗುರುಕುಲ ಪಾಠಶಾಲೆ ನಡೆಸುತ್ತಿದ್ದ ಶ್ರೀಗಳು ಈಗ ಸೋಸಲೇ ವ್ಯಾಸರಾಜ ಮಠದ ಪೀಠಾಧ್ಯಕ್ಷರಾಗಿ ಶನಿವಾರ ಅಧಿಕಾರ ಸ್ವೀಕರಿಸಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮಾನ್ವಿ ಪಟ್ಟಣದ ಸಂಜೀವರಾಯ ದೇವಸ್ಥಾನದಲ್ಲಿ ಶನಿವಾರ ಬೆಳಗ್ಗೆ 6 ಗಂಟೆಗೆ ನಡೆಯುವ ಕಾರ್ಯಕ್ರಮದಲ್ಲಿ ಪೀಠಾಧ್ಯಕ್ಷರಾಗಿ ಶ್ರೀಗಳು ಅಧಿಕಾರ ಸ್ವೀಕರಿಸುವರು.

ಸುವಿದ್ಯೇಂದ್ರ ತೀರ್ಥರು ಇದಕ್ಕಿಂತ ಮೊದಲು ಮಂತ್ರಾಲಯದ ಶ್ರೀ ರಾಘವೇಂದ್ರಸ್ವಾಮಿಗಳ ಮಠದ ಪೂರ್ವ ಉತ್ತರಾಧಿಕಾರಿಯಾಗಿದ್ದರು.

ಈ ಮೊದಲು ಸೋಸಲೆ ಮಠಕ್ಕೆ ಪೀಠಾಧಿಪತಿಯಾಗಿದ್ದ ವಿದ್ಯಾಮನೋಹರ ತೀರ್ಥರು ಮಠದ ಆಸ್ತಿಯನ್ನು ಸ್ವಂತಕ್ಕೆ ಬಳಸಿಕೊಂಡ ಆರೋಪದ ಮೇಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಈ ವಿವಾದದ ಹಿನ್ನೆಲೆಯಲ್ಲಿ 2012ರ ಮೇ 28ರಂದು ಮುಜರಾಯಿ ಇಲಾಖೆ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ಮಠವನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದರು.

ಮೊಯ್ಲಿ ಕೃತಿಯ ತೆಲುಗು ಆವೃತ್ತಿ ಬಿಡುಗಡೆ ನಾಳೆ

ಉದಯವಾಣಿ ದೆಹಲಿ ಪ್ರತಿನಿಧಿ: ಕೇಂದ್ರ ಪೆಟ್ರೋಲಿಯಂ ಸಚಿವ ವೀರಪ್ಪ ಮೊಯ್ಲಿ ಅವರ 'ರಾಮಾಯಣ ಮಹಾನ್ವೇಷಣಂ' ಕೃತಿಯ ತೆಲುಗು ಭಾಷಾಂತರ ಭಾನುವಾರ ಲೋಕಾರ್ಪಣೆಗೊಳ್ಳಲಿದೆ. ಶುಕ್ರವಾರ ತಮ್ಮ ನಿವಾಸದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಸಚಿವರು ಈ ಮಾಹಿತಿ ನೀಡಿದರು. ಹೈದರಾಬಾದ್‌ನಲ್ಲಿ ಪುಸ್ತಕ ಬಿಡುಗಡೆ ಕಾರ್ಯಕ್ರಮ ನಡೆಯಲಿದ್ದು, ಆಂಧ್ರಪ್ರದೇಶ ರಾಜ್ಯಪಾಲ ನರಸಿಂಹನ್ ಪುಸ್ತಕ ಬಿಡುಗಡೆ ಮಾಡಲಿದ್ದಾರೆ. ಮುಖ್ಯಮಂತ್ರಿ ಕಿರಣ್ ಕುಮಾರ್ ರೆಡ್ಡಿ ಸೇರಿದಂತೆ ಅನೇಕ ಗಣ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲಿದ್ದಾರೆ. 'ಕನ್ನಡ ಮತ್ತು ತೆಲುಗು ಭಾಷೆಗಳು ಪ್ರಾಚೀನ ಕಾಲದಿಂದಲೂ ಪರಸ್ಪರ ಸೌಹಾರ್ದ ಸಂಬಂಧ ಹೊಂದಿವೆ. ನನ್ನ ಕೃತಿಯೊಂದು ತೆಲುಗು ಭಾಷೆಗೆ ಭಾಷಾಂತರ ಹೊಂದುತ್ತಿರುವುದು ಹೆಮ್ಮೆ ಉಂಟು ಮಾಡಿದೆ' ಎಂದು ಅವರು ಹರ್ಷ ವ್ಯಕ್ತಪಡಿಸಿದರು.



ಮೀನುಗಾರರಿಗೆ ರಿಯಾಯಿತಿ ಡೀಸೆಲ್: ವೀರಪ್ಪ ಮೊಯ್ಲಿಗೆ ಮನವಿ

ಉದಯವಾಣಿ ದೆಹಲಿ ಪ್ರತಿನಿಧಿ: ಮೀನುಗಾರರಿಗೆ ರಿಯಾಯಿತಿ ದರದಲ್ಲಿ ಡೀಸೆಲ್ ಪೂರೈಕೆ ಮಾಡಬೇಕು ಎಂದು ರಾಜ್ಯಸಭಾ ಸದಸ್ಯ ಆಸ್ಕರ್ ಫರ್ನಾಂಡಿಸ್ ನೇತೃತ್ವದ ನಿಯೋಗ ಪೆಟ್ರೋಲಿಯಂ ಸಚಿವ ವೀರಪ್ಪ ಮೊಯ್ಲಿ ಅವರನ್ನು ಭೇಟಿಯಾಗಿ ಒತ್ತಾಯಿಸಿದೆ. ಶುಕ್ರವಾರ ಮೊಯ್ಲಿ ಅವರನ್ನು ಭೇಟಿಯಾದ ನಿಯೋಗ, ಮೀನುಗಾರಿಕಾ ಪ್ರದೇಶಗಳಲ್ಲಿನ ಪೆಟ್ರೋಲ್ ಬಂಕ್‌ಗಳಿಂದ ಮೀನುಗಾರರು ಲೀ.12ರೂ ಹೆಚ್ಚು ನೀಡಿ ಸಗಟು ದರದಲ್ಲಿ ಡೀಸೆಲ್ ಖರೀದಿಸುತ್ತಿದ್ದಾರೆ. ಅವರಿಗೆ ಚಿಲ್ಲರೆ ವ್ಯಾಪಾರ ದರದಲ್ಲಿ ಡೀಸೆಲ್ ಪೂರೈಕೆ ಮಾಡುವಂತೆ ಕ್ರಮ ಕೈಗೊಳ್ಳಬೇಕು ಎಂದು ಕೇಳಿಕೊಂಡಿತು. ನಿಯೋಗದಲ್ಲಿ ಉಡುಪಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪ್ರಮೋದ್ ಮಧ್ವರಾಜ್, ಮಲ್ಪೆ ಮೀನುಗಾರರ ಸಂಘದ ಅಧ್ಯಕ್ಷ ಹಿರಿಯಣ್ಣ ಟಿ.ಕಿದಿಯೂರು, ಶಿವಪ್ಪ ಕಾಂಚನ್, ವಾಸುದೇವ ಸಾಲಿಯನ್, ಕ್ಯಾಪ್ಟನ್ ಕೃಷ್ಣಪ್ಪ, ನಾರಾಯಣ ಕರ್ಕೆರಾ, ಪ್ರಶಾಂತ್ ಮತ್ತು ದಯಾನಂದ ಸುವರ್ಣ ಇದ್ದರು.

ಮಿನಿ ಸುದ್ದಿ

■ ಅಡಿಗ ಹತ್ಯೆ: ಬಾಯಿರಿಗೆ ನ್ಯಾಯಾಂಗ ಬಂಧನ

ಕುಂದಾಪುರ: ಆರ್‌ಟಿಐ ಕಾರ್ಯಕರ್ತ ವಾಸುದೇವ ಅಡಿಗ ಕೊಲೆ ಪ್ರಕರಣದ ಪ್ರಮುಖ ಆರೋಪಿ ಜ್ಯೋತಿಷಿ ರಮೇಶ್ ಬಾಯಿರಿಯನ್ನು ಶುಕ್ರವಾರ ಬೆಳಗ್ಗೆ ಕುಂದಾಪುರ ನ್ಯಾಯಾಧೀಶರ ಮುಂದೆ ಹಾಜರುಪಡಿಸಿದ್ದು, ಫೆ. 7ರ ವರೆಗೆ ನ್ಯಾಯಾಂಗ ಬಂಧನ ವಿಧಿಸಲಾಗಿದೆ. ನ್ಯಾಯಾಲಯಕ್ಕೆ ಜ. 25ರಂದು ಸರಕಾರಿ ರಜೆ ಇದ್ದ ಕಾರಣ ನ್ಯಾಯಾಧೀಶರ ಮನೆಯಲ್ಲಿ ಆರೋಪಿಯನ್ನು ಹಾಜರುಪಡಿಸಲಾಯಿತು.

■ ಎಸ್ಸಿ, ಎಸ್ಟಿ ವಿದ್ಯಾರ್ಥಿಗಳಿಗೆ ತರಬೇತಿ

ಬೆಂಗಳೂರು: ಪರಿಶಿಷ್ಟ ವರ್ಗದ ಎಸ್‌ಎಸ್‌ಎಲ್‌ಸಿ, ಐಟಿಐ, ಡಿಪ್ಲೊಮಾ, ಪದವಿ ವಿದ್ಯಾರ್ಹತೆ ಹೊಂದಿದ ವಿದ್ಯಾವಂತ ನಿರುದ್ಯೋಗಿಗಳಿಗೆ ಮೈಸೂರಿನ ಸೆಂಟ್ರಲ್ ಇನ್ಸ್‌ಟಿಟ್ಯೂಟ್ ಆಫ್ ಪ್ಲಾಸ್ಟಿಕ್ ಇಂಜಿನಿಯರಿಂಗ್ ಟೆಕ್ನಾಲಜಿ ಸಂಸ್ಥೆ ಆರು ತಿಂಗಳ ವಿವಿಧ ಕೋರ್ಸ್‌ಗಳ ತರಬೇತಿ ನೀಡಲು ಅರ್ಜಿ ಆಹ್ವಾನಿಸಿದೆ. ಅರ್ಜಿ ಸಲ್ಲಿಸಲು ಫೆ.8 ಕೊನೆ ದಿನ. ಹೆಚ್ಚಿನ ವಿವರಗಳಿಗೆ ಸಿ.ಎನ್. ದೇವರಾಜ್, ಉಪ ನಿರ್ದೇಶಕರು, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ, ಕೃಷಿ ಭವನ, ಹಡ್ಸನ್ ಸರ್ಕಲ್, ಬೆಂಗಳೂರು ಅಥವಾ ಆಯಾ ಜಿಲ್ಲೆಯ ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನೆ, ಜಿಲ್ಲಾ ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿಗಳು ಮತ್ತು ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಕಚೇರಿ ಅಥವಾ ದೂರವಾಣಿ 080-22249075 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

■ ಮಿಲಿಟರಿ ಕಾಲೇಜು ಪ್ರವೇಶಕ್ಕೆ ಅರ್ಜಿ ಆಹ್ವಾನ

ಬೆಂಗಳೂರು: ಡೆಹ್ರಾಡೂನ್‌ನಲ್ಲಿರುವ ರಾಷ್ಟ್ರೀಯ ಮಿಲಿಟರಿ ಕಾಲೇಜಿನಲ್ಲಿ 8ನೇ ತರಗತಿ ಪ್ರವೇಶಕ್ಕಾಗಿ ಜೂನ್ 2013ರಲ್ಲಿ ನಡೆಯುವ ಪ್ರವೇಶ ಪರೀಕ್ಷೆಗೆ ಅರ್ಜಿ ಆಹ್ವಾನಿಸಲಾಗಿದೆ. ಅರ್ಜಿ ಹಾಗೂ ವಿವರಣಾ ಪತ್ರವನ್ನು ನಿರ್ದೇಶಕರು, ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ, ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಭವನ, ನಂ.58 ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ರಸ್ತೆ, ಬೆಂಗಳೂರು-560025 ಇವರಲ್ಲಿ ಪಡೆದು, ಮಾರ್ಚ್ 31ರೊಳಗೆ ಸಲ್ಲಿಸಬೇಕು. ಹೆಚ್ಚಿನ ಮಾಹಿತಿಗೆ ಸಮೀಪದ ಜಿಲ್ಲಾ ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಕಾರ್ಯಾಲಯ ಅಥವಾ ದೂರವಾಣಿ: 080-25589459ಗೆ ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

■ ಪ್ಲಾಸ್ಟಿಕ್ ಟೆಕ್ನಾಲಜಿ ತರಬೇತಿ: ಅವಧಿ ವಿಸ್ತರಣೆ

ಬೆಂಗಳೂರು: ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಹಿಂದುಳಿದ ವರ್ಗಗಳ ಅರ್ಹ ಅಭ್ಯರ್ಥಿಗಳಿಗೆ ನರ್ಸಿಂಗ್ ಹಾಗೂ ಕೌಶಲ್ಯ ಯೋಜನೆಯಡಿ ಪ್ಲಾಸ್ಟಿಕ್ ಪ್ರೊಸೆಸಿಂಗ್ ಟೆಕ್ನಾಲಜಿ ತರಬೇತಿಗೆ ಅರ್ಜಿ ಸಲ್ಲಿಸಲು ನಿಗದಿಪಡಿಸಿದ್ದ ದಿನಾಂಕವನ್ನು ಜ.30ರವರೆಗೆ ವಿಸ್ತರಿಸಿದೆ. ಜ.30ರೊಳಗೆ ಅರ್ಜಿಗಳನ್ನು ಆಯಾಯ ಜಿಲ್ಲಾ ಹಿಂದುಳಿದ ವರ್ಗಗಳ ಕಲ್ಯಾಣಾಧಿಕಾರಿಗಳ ಕಚೇರಿಗಳಲ್ಲಿ ಸಲ್ಲಿಸಬಹುದು ಎಂದು ಇಲಾಖೆಯ ಪ್ರಕಟಣೆ ತಿಳಿಸಿದೆ.

ಮೇರು ಸಾಧನೆ

■ ದೇಶದ ಮೊದಲ ಮಧ್ಯಂತರಗಾಮಿ ಕ್ಷಿಪಣಿಯಿದು

'ನಿರ್ಭಯ್' ಕ್ಷಿಪಣಿಗೆ ಫೆಬ್ರವರಿಯಲ್ಲಿ ಪರೀಕ್ಷೆ

ಬೆಂಗಳೂರು: ಅಣುಬಾಂಬ್ ಹೊತ್ತೊಯ್ಯುವ ಸಾಮರ್ಥ್ಯವಿರುವ ದೇಶದ ಮೊಟ್ಟ ಮೊದಲ ಮಧ್ಯಂತರಗಾಮಿ ಕ್ರೂಸ್ ಕ್ಷಿಪಣಿ 'ನಿರ್ಭಯ್'ನ ಪರೀಕ್ಷಾರ್ಥ ಉಡಾವಣೆಯನ್ನು ಫೆಬ್ರವರಿಯಲ್ಲಿ ನಡೆಸಲು ಉದ್ದೇಶಿಸಲಾಗಿದೆ ಎಂದು ರಕ್ಷಣಾ ಸಚಿವರ ವೈಜ್ಞಾನಿಕ ಸಲಹೆಗಾರ ಹಾಗೂ ಡಿಆರ್‌ಡಿಒ ಮಹಾ ನಿರ್ದೇಶಕ ಡಾ.ವಿ.ಕೆ. ಸಾರಸ್ವತ್ ತಿಳಿಸಿದ್ದಾರೆ.

ಬೆಂಗಳೂರಿನ ಏರೋನಾಟಿಕಲ್ ಡೆವಲಪ್‌ಮೆಂಟ್ ಎಸ್ಟಾಬ್ಲಿಷ್‌ಮೆಂಟ್(ಎಡಿಇ)ನಲ್ಲಿ ಶುಕ್ರವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿಆರ್‌ಡಿಒ ಅಭಿವೃದ್ಧಿಪಡಿಸಿರುವ ನಿರ್ಭಯ್ ಕ್ಷಿಪಣಿಯ ಅಂತಿಮ ಹಂತದ ಜೋಡಣಾ ಕಾರ್ಯ ಈಗ ನಡೆಯುತ್ತಿದೆ. ರಾಡಾರ್ ಕಣ್ತಪ್ಪಿಸುವ ಕ್ಷಮತೆಯ (ಸ್ಟೆಲ್ತ್) ಸುಮಾರು 750 ಕಿ.ಮೀ. ದೂರ ಕ್ರಮಿಸುವ ನಿರ್ಭಯ್ ಅನ್ನು ಫೆಬ್ರವರಿ ಅಂತ್ಯದೊಳಗೆ ಪ್ರಯೋಗಾರ್ಥ ಉಡಾವಣೆ ಮಾಡಲಾಗುವುದು ಎಂದರು. ಭಾರತೀಯ ಸೇನೆಯ ಮೂರು ವಿಭಾಗಗಳಿಗೂ ಉಪಯುಕ್ತವಾಗುವಂತೆ ಈ ಕ್ಷಿಪಣಿ ನಿರ್ಮಾಣ ಮಾಡಲಾಗುತ್ತಿದೆ. ವಾಯುದಳದ ಆವೃತ್ತಿಯ ನಿರ್ಭಯ್ ಅನ್ನು ಅಂತಿಮವಾಗಿ ಸುಖೋಯ್ ಎಂಕೆಐ ಯುದ್ಧ ವಿಮಾನದಲ್ಲಿ ಅಳವಡಿಸಲು ಉದ್ದೇಶಿಸಲಾಗಿದೆ ಎಂದು ತಿಳಿಸಿದರು.

ಕಾವೇರಿ ಎಂಜಿನ್ ಸದ್ಬಳಕೆ: ಲಘು ಯುದ್ಧ ವಿಮಾನಗಳಿಗಾಗಿ ಅಭಿವೃದ್ಧಿಪಡಿಸಿರುವ ಸ್ವದೇಶಿ ನಿರ್ಮಿತ ಕಾವೇರಿ ಕ್ರಯೋಜೆನಿಕ್ ಎಂಜಿನ್ ನಿರೀಕ್ಷಿತ ಯಶಸ್ಸು ಗಳಿಸದ ಕಾರಣ ಅದನ್ನು ಮಾನವ ರಹಿತ ವಿಮಾನಕ್ಕೆ ಅಳವಡಿಸಲು ಉದ್ದೇಶಿಸಲಾಗಿದೆ. ಈಗ ಕಾವೇರಿ ಎಂಜಿನ್ ಅನ್ನು ರಷ್ಯಾದಲ್ಲಿ ಐಎಲ್-76 ಕಾರ್ಗೊ ವಿಮಾನಕ್ಕೆ ಅಳವಡಿಸಿ ಪರೀಕ್ಷೆಗೆ ಒಳಪಡಿಸಿದ್ದು, ಅದು ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ. ಹೀಗಾಗಿ, ಅದನ್ನು ಮುಂದೆ ಭಾರತೀಯ ಮಾನವರಹಿತ ಏರ್‌ಕ್ರಾಫ್ಟ್‌ನಲ್ಲಿ ಬಳಸಲಾಗುವುದು ಎಂದು ಅವರು ಹೇಳಿದರು.

ರುಸ್ತುಂ-2 ಈ ವರ್ಷ ರೆಡಿ: ಎಡಿಇ ಅಭಿವೃದ್ಧಿಪಡಿಸುತ್ತಿರುವ 'ರುಸ್ತುಂ-2' ಮಾನವರಹಿತ ಸರ್ವೇಕ್ಷಣಾ ವಿಮಾನ ಕೂಡ ಈ ವರ್ಷದ ಅಂತ್ಯಕ್ಕೆ ರೆಡಿಯಾಗಲಿದೆ. 'ರುಸ್ತುಂ-1' ಯುಎವಿ ಏರ್‌ಕ್ರಾಫ್ಟ್‌ಗೆ ಹೋಲಿಸಿದರೆ ಇದು ಬಹಳಷ್ಟು ಸುಧಾರಿತ ತಂತ್ರಜ್ಞಾನಗಳನ್ನು ಹೊಂದಿವೆ. 1.8 ಟನ್ ತೂಕ ಹೊಂದಿದ್ದು, 350 ಕೆ.ಜಿ. ಪೇಲೋಡ್ ಸಾಮರ್ಥ್ಯವಿದೆ. ಮಿಲಿಟರಿ ಕಾರ್ಯಾಚರಣೆಗೆ ಬೇಕಾದ ಎಲ್ಲ ರೀತಿಯ ಸಂಪರ್ಕ, ಸಂವಹನ ವ್ಯವಸ್ಥೆಯನ್ನು ರುಸ್ತುಂ-2 ಏರ್‌ಕ್ರಾಫ್ಟ್‌ನಲ್ಲಿ ಅಳವಡಿಸಲಾಗಿದೆ ಎಂದರು.

700 ವಿಜ್ಞಾನಿಗಳು ಗುಡ್‌ಬೈ: ಕಳೆದ ಐದು ವರ್ಷದಲ್ಲಿ ಡಿಆರ್‌ಡಿಒ ಸಂಸ್ಥೆಯಿಂದ ಒಟ್ಟು 700 ಮಂದಿ ವಿಜ್ಞಾನಿಗಳು ಕೆಲಸಕ್ಕೆ ಗುಡ್‌ಬೈ ಹೇಳಿದ್ದಾರೆ. ಡಿಆರ್‌ಡಿಒದಲ್ಲಿ ಒಟ್ಟು 7000 ಉದ್ಯೋಗಿಗಳಿದ್ದು, ಪ್ರತಿ ವರ್ಷ ಶೇ.2ರಷ್ಟು ಮಂದಿ ಸಂಸ್ಥೆ ಬಿಟ್ಟು ಬೇರೆ ಕಡೆ ಸೇರ್ಪಡೆಯಾಗುತ್ತಿದ್ದಾರೆ. ಎಲ್ಲ ಸಂಸ್ಥೆಗಳಂತೆಯೇ ಇಲ್ಲಿಯೂ ಉದ್ಯೋಗಿಗಳು ನೌಕರಿ ತೊರೆದು ಬೇರೆ ಕಡೆ ಹೋಗುತ್ತಿರುವುದು ಸಹಜ ಪ್ರಕ್ರಿಯೆಯಾಗಿದ್ದು, ಇದರಿಂದ ಡಿಆರ್‌ಡಿಒ ಚಟುವಟಿಕೆಗಳಿಗೆ ಯಾವುದೇ ತೊಂದರೆಯಾಗಿಲ್ಲ ಎಂದು ಸಾರಸ್ವತ್ ಸ್ಪಷ್ಟಪಡಿಸಿದರು.



ನಿರ್ಭಯ್ ಕ್ಷಿಪಣಿಯ ಅಂತಿಮ ಹಂತದ ಜೋಡಣಾ ಕಾರ್ಯ ಈಗ ನಡೆಯುತ್ತಿದೆ. ರಾಡಾರ್ ಕಣ್ತಪ್ಪಿಸುವ ಕ್ಷಮತೆಯ (ಸ್ಟೆಲ್ತ್) ಸುಮಾರು 750 ಕಿ.ಮೀ. ದೂರ ಕ್ರಮಿಸುವ ನಿರ್ಭಯ್ ಅನ್ನು ಫೆಬ್ರವರಿ ಅಂತ್ಯದೊಳಗೆ ಪ್ರಯೋಗಾರ್ಥ ಉಡಾವಣೆ ಮಾಡಲಾಗುವುದು, ಹಾಗೂ ಭಾರತೀಯ ಸೇನೆಯ ಮೂರು ವಿಭಾಗಗಳಿಗೂ ಉಪಯುಕ್ತವಾಗುವಂತೆ ಈ ಕ್ಷಿಪಣಿ ನಿರ್ಮಾಣ ಮಾಡಲಾಗುತ್ತಿದೆ.

● **ಡಾ.ವಿ.ಕೆ. ಸಾರಸ್ವತ್,** ಡಿಆರ್‌ಡಿಒ ಮಹಾ ನಿರ್ದೇಶಕ